# ಕರ್ನಾಟಕ ವಿಧಾನ ಪರಿಷತ್ತು
## (150ನೇ ಅಧಿವೇಶನ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **643**
ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 11.12.2023
ಉತ್ತರಿಸುವವರು : ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬೇರೆಬೇರೆ ಮಂಡಳಿಗಳು ಇರುವಂತೆ ಬಿದಿರು ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವ ಯಾವುದಾದರೂ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ ಅದರ ಮಾಹಿತಿ ನೀಡುವುದು;ಇಲ್ಲವಾದಲ್ಲಿ, ಬಿದಿರು ಮಂಡಳಿಯನ್ನು ಸ್ಥಾಪಿಸಲು ಸರ್ಕಾರದ ಚಿಂತನೆಗಳೇನು; (ವಿವರ ನೀಡುವುದು) | ಬಿದಿರು ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವ ಯಾವುದೇ ಪ್ರಸ್ತಾವನೆಗಳು ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ. |
| ಆ) | ರಾಜ್ಯದಲ್ಲಿ ಬಿದಿರು ಬೆಳೆಯನ್ನು ಎಲ್ಲೆಲ್ಲಿ ಹಾಗೂ ಎಷ್ಟು ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ; ರೈತರು ಈ ಬಿದಿರು ಬೆಳೆಯಲು ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳೇನು; (ಮಾಹಿತಿ ನೀಡುವುದು) | ಬಿದಿರು ನೆಡುತೋಪನ್ನು ಬೆಳೆಸಲು ರಾಜ್ಯಮಟ್ಟದಲ್ಲಿ ಪ್ರತ್ಯೇಕವಾಗಿ ಯಾವುದೇ ಯೋಜನೆಗಳು ಅನುಷ್ಠಾನಗೊಳಿಸಲಾಗುತ್ತಿಲ್ಲ.<br>ಆದರೆ, ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಬಿದಿರು ಮಿಷನ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಈ ಯೋಜನೆಯಡಿ ರೈತರು ಅವರ ಜಮೀನಿನಲ್ಲಿ ಬಿದಿರು ನೆಡುತೋಪನ್ನು ಬೆಳೆಸಲು 3 ವರ್ಷಗಳಿಗೆ ಪ್ರತಿ ಹೆಕ್ಟೇರ್‌ಗೆ ಒಟ್ಟು ರೂ.50,000/-(1ನೇ ವರ್ಷ - ರೂ.25,000/-; 2ನೇ ವರ್ಷ - ರೂ.15,000/-; ಹಾಗೂ 3ನೇ ವರ್ಷ- ರೂ.10,000/-) ಗಳ ಸಹಾಯಧನವನ್ನು ನೀಡಲಾಗುತ್ತಿದೆ.<br>2023-24ನೇ ಸಾಲಿನಲ್ಲಿ ಈ ಕೆಳಕಂಡ ವಿಭಾಗಗಳಲ್ಲಿ ಸರ್ಕಾರಿ/ಖಾಸಗಿ ಜಮೀನುಗಳಲ್ಲಿ ಬಿದಿರು ನೆಡುತೋಪು ಬೆಳೆಸಲು ಗುರಿ ನಿಗದಿಪಡಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ. |

| ಕ್ರಸಂ | ವಿಭಾಗ | ನಿಗದಿಪಡಿಸಲಾದ ಗುರಿ (ಹೆ.ಗಳಲ್ಲಿ) | |
|---|---|---|---|
| | | ಸರ್ಕಾರಿ ಜಮೀನು | ಖಾಸಗಿ ಜಮೀನು |
| 1 | ಬೆಂಗಳೂರು ಗ್ರಾಮಾಂತರ | 25 | 50 |
| 2 | ಕೋಲಾರ | 75 | 50 |
| 3 | ಚಿಕ್ಕಬಳ್ಳಾಪುರ | 50 | 50 |
| 4 | ಧಾರವಾಡ | 75 | 50 |
| 5 | ಶಿರಸಿ | 75 | 50 |
| 6 | ಭದ್ರಾವತಿ | 50 | 50 |
| 7 | ಕೊಪ್ಪ | 75 | - |
| 8 | ಯಲ್ಲಾಪುರ | 50 | - |
| 9 | ಭದ್ರಾವತಿ | 25 | - |
| **ಒಟ್ಟು** | | **500** | **300** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಬಿದಿರನ್ನು ಬೆಳೆದು ಅದರ ಮಾರಾಟಕ್ಕೆ ಸೂಕ್ತ ಮಾರುಕಟ್ಟೆಯನ್ನು ನಿರ್ಮಾಣ ಮಾಡಿದರೆ ನೂರಾರು ರೈತರು ಈ ಬಿದಿರು ಬೆಳೆಯನ್ನು ಬೆಳೆಯಲು ಮುಂದೆ ಬರುವುದನ್ನು ಉತ್ತೇಜಿಸಲು ಸರ್ಕಾರ ಯಾವುದಾದರೂ ತೀರ್ಮಾನ ಕೈಗೊಳ್ಳುವುದೇ? (ಮಾಹಿತಿ ನೀಡುವುದು) | ಈ ಉದ್ದೇಶಕ್ಕಾಗಿ ಪ್ರಸ್ತಾವನೆಗಳು ಸ್ವೀಕೃತವಾದಲ್ಲಿ, ಸರ್ಕಾರದ ಹಂತದಲ್ಲಿ ತೀರ್ಮಾನ ಕೈಗೊಳ್ಳಲು ಪರಿಶೀಲಿಸಲಾಗುವುದು. |

ಸಂಖ್ಯೆ: ಅಪಜೀ 31 ಎಫ್‌ಡಿಪಿ 2023

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.